# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 22/2021**

**ದೋ.ಸಾ. :39 ಫ್ರಾ.ಸಾ. : 33**

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀಧರ ಎಸ್.ಆರ್. |
| ತಂದೆಯ ಹೆಸರು | : | ರಾಮಚಂದ್ರ ಮೂರ್ತಿ |
| ವಯಸ್ಸು | : | 40 ವರ್ಷ |
| ಕೆಲಸ | : | ಪೊಲೀಸ್ ನಿರೀಕ್ಷಕರು, ಗೋಕರ್ಣ ಪೊಲೀಸ್ ಠಾಣೆ |
| ವಾಸ | : | ಗೋಕರ್ಣ |

**ದಿನಾಂಕಃ 17-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

1. ಅಕ್ಟೋಬರ್ 2020 ರಿಂದ ಜನವರಿ 2023 ರವರೆಗೆ ಹೊನ್ನಾವರ ವೃತ್ತದಲ್ಲಿ ಸಿ.ಪಿ.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ.03-05-2021 ರಂದು ಚಾಸಾ-38 ರವರಿಂದ ಈ ಪ್ರಕರಣದ ಕಡತವನ್ನು ಪಡೆದುಕೊಂಡು, ತನಿಖೆಯನ್ನು ಮುಂದುವರಿಸಿರುತ್ತೇನೆ. ಅದೇ ದಿನ ಆರೋಪಿಯನ್ನು ಪತ್ತೆ ಮಾಡಿ, ತಂದು ಹಾಜರುಪಡಿಸುವಂತೆ, ಚಾಸಾ-29 ಹಾಗೂ ಇತರೇ ಸಿಬ್ಬಂದಿಯವರಿಗೆ ಜ್ಞಾಪನವನ್ನು ನೀಡಿರುತ್ತೇನೆ. ಸದರಿ ಜ್ಞಾಪನವನ್ನು ಈಗಾಗಲೇ ನಿಪಿ-110 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-110(ಬಿ) ಎಂದು ಗುರುತಿಸಲಾಯಿತು. ಅದೇ ದಿನ ಕುಮಟಾ ಸರಕಾರಿ ಆಸ್ಪತ್ರೆಗೆ ಭೇಟಿ ನೀಡಿ, ಶವಾಗಾರದಲ್ಲಿ ಮೃತ ಅಬುತಾಲೀಬ್ ನ ಶವವನ್ನು ಪರಿಶೀಲಿಸಿದ್ದು, ಮೃತನ ಎದೆಯ ಎಡಭಾಗದಲ್ಲಿ ಚಾಕು ಚುಚ್ಚಿದ ಸುಮಾರು 2 ಇಂಚು ಉದ್ದ, ½ ಇಂಚು ಅಗಲದ ರಕ್ತ ಗಾಯವಾಗಿರುವುದು ಕಂಡುಬಂದಿರುತ್ತದೆ. ಮೃತ ದೇಹವನ್ನು ಮೃತನ ಅಣ್ಣನ ಮಗನಾದ ಚಾಸಾ-17 ರವರು ನೋಡಿ ಗುರುತಿಸಿದ್ದು, ಶವಪಂಚನಾಮೆಗೆ ಸಹಕರಿಸುವಂತೆ ಆಸ್ಪತ್ರೆಯಲ್ಲಿದ್ದ ಚಾಸಾ-2 ಮತ್ತು 3 ರವರಿಗೆ ನೋಟಿಸ್ ಜಾರಿ ಮಾಡಿರುತ್ತೇನೆ. ಸದರಿ ನೋಟಿಸನ್ನು ಈಗಾಗಲೇ ನಿಪಿ-28 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-28(ಬಿ) ಎಂದು ಗುರುತಿಸಲಾಯಿತು. ಸದರಿ ಪಂಚರ ಸಮಕ್ಷಮ ಶವವನ್ನು ಪರಿಶೀಲಿಸಿ, ಸಂಜೆ 4.00 ರಿಂದ 5.30 ಗಂಟೆಯವರೆಗೆ ನಿಪಿ-29 ರಂತೆ ಶವ ಪಂಚನಾಮೆಯನ್ನು ಜರುಗಿಸಿರುತ್ತೇನೆ ಹಾಗೂ ನಿಪಿ-11,

12, 13 ಮತ್ತು 14 ರಂತೆ ಫೋಟೊ ತೆಗೆಸಿರುತ್ತೇನೆ. ನಿಪಿ–29 ಪಂಚನಾಮೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–29(ಬಿ) ಎಂದು ಗುರುತಿಸಲಾಯಿತು.

2. ಶವ ಪಂಚನಾಮೆಯ ನಂತರ ಮೃತ ದೇಹದ ಮರಣೋತ್ತರ ಪರೀಕ್ಷೆ ನಡೆಸುವಂತೆ ಕುಮಟಾ ಆಸ್ಪತ್ರೆಯ ವೈದ್ಯಾಧಿಕಾರಿಯಾದ ಚಾಸಾ–27 ರವರಿಗೆ ನಮೂನೆ–146(i), 146(ii) ರಡಿಯಲ್ಲಿ ಕೋರಿಕೆ ನೀಡಿರುತ್ತೇನೆ. ಸದರಿ ಕೋರಿಕೆ ಪತ್ರವನ್ನು ಈಗಾಗಲೇ ನಿಪಿ–77 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ–77(ಬಿ) ಮತ್ತು 77(ಸಿ) ಎಂದು ಗುರುತಿಸಲಾಯಿತು. ಅದೇ ದಿನ, ಚಂದಾವರ ಗ್ರಾಮದ ಜನತಾ ಕಾಲೋನಿಯ ಘಟನಾ ಸ್ಥಳಕ್ಕೆ ಭೇಟಿ ನೀಡಿ, ಅಲ್ಲಿ ಹಾಜರಿದ್ದ ಪ್ರತ್ಯಕ್ಷ ಸಾಕ್ಷಿದಾರ ಚಾಸಾ–13 ರವರು ಘಟನಾ ಸ್ಥಳವನ್ನು ತೋರಿಸುವುದಾಗಿ ಹೇಳಿದ ಮೇರೆಗೆ, ಚಾಸಾ–4 ಮತ್ತು 5 ರವರಿಗೆ ಪಂಚರಾಗಿ ಬರುವಂತೆ ನೋಟೀಸ್ ನೀಡಿ, ಸದರಿ ಪಂಚರ ಸಮಕ್ಷಮ ಚಾಸಾ–13 ರವರು ತೋರಿಸಿದ ಘಟನಾ ಸ್ಥಳವನ್ನು ಪರಿಶೀಲಿಸಿ, ಸಂಜೆ 6.15 ಗಂಟೆಯಿಂದ 7.45 ಗಂಟೆಯವರೆಗೆ ನಿಪಿ–31 ರಂತೆ ಪಂಚನಾಮೆ ತಯಾರಿಸಿ, ನಿಪಿ–32 ರಂತೆ ನಕಾಶೆ ತಯಾರಿಸಿ, ನಿಪಿ–33 ಮತ್ತು 34 ರಂತೆ ಫೋಟೊ ತೆಗೆಸಿರುತ್ತೇನೆ. ಸಾಕ್ಷಿಯು ತಾನು ಪಂಚರಿಗೆ ನೀಡಿದ ನೋಟಿಸನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ–30 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–30(ಬಿ) ಎಂದು ಗುರುತಿಸಲಾಯಿತು. ನಿಪಿ–31 ಪಂಚನಾಮೆ, ನಿಪಿ–32 ನಕಾಶೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–31(ಸಿ) ಮತ್ತು ನಿಪಿ–32(ಬಿ) ಎಂದು ಗುರುತಿಸಲಾಯಿತು. ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ–13 ರವರು ಈಗಾಗಲೇ ಮೃತಪಟ್ಟಿರುವ ಕಾರಣ, ಅವರ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದರಿಂದ, ಅವುಗಳನ್ನು ನಿಪಿ–31(ಡಿ), ನಿಪಿ–32(ಸಿ) ಎಂದು ಗುರುತಿಸಲಾಯಿತು.

3. ಪಂಚನಾಮೆಯ ಕಾಲಕ್ಕೆ ಚಾಸಾ–13 ರವರು ಘಟನಾ ಸ್ಥಳದಲ್ಲಿ ಬಿದ್ದಿದ್ದ ರಕ್ತವನ್ನು ತೋರಿಸಿ, ಆರೋಪಿಯು ಮೃತ ಅಬು ತಾಲೀಬ್ ರವರಿಗೆ ಚಾಕುವಿನಿಂದ ಎದೆಗೆ ಇರಿದಾಗ, ಬಿದ್ದ ರಕ್ತ ಎಂದು ಹೇಳಿದ್ದು, ಸ್ಥಳದಲ್ಲಿ ಬಿದ್ದ ರಕ್ತಸಿಕ್ತ ಮಣ್ಣನ್ನು ಹಾಗೂ ಅದರ ಪಕ್ಕದಲ್ಲಿದ್ದ ರಕ್ತ ತಾಗದ ಮಣ್ಣನ್ನು ಜಪ್ತುಪಡಿಸಿಕೊಂಡಿರುತ್ತೇನೆ. ಘಟನಾ ಸ್ಥಳದಲ್ಲಿ ಬಿದ್ದಿದ್ದ ಮೃತನಿಗೆ ಸಂಬಂಧಿಸಿದ ಕನ್ನಡಕದ ಗಾಜಿನ ಚೂರುಗಳು ಹಾಗೂ ಕನ್ನಡಕದ ಫ್ರೇಂ ಗೆ ರಕ್ತ ತಾಗಿರುವಂತೆ ಕಂಡುಬಂದಿದ್ದು, ಅವುಗಳನ್ನೂ ಸಹ ಜಪ್ತುಪಡಿಸಿಕೊಂಡಿರುತ್ತೇನೆ. ಘಟನಾ ಸ್ಥಳದಲ್ಲಿ ಮೃತನಿಗೆ ಸಂಬಂಧಿಸಿದ ಎಡಗಾಲಿನ ಪ್ಯಾರಗಾನ್ ಕಂಪನಿಯ ಕಪ್ಪ ಬಣ್ಣದ ಚಪ್ಪಲಿ ಬಿದ್ದಿದ್ದು, ಅದಕ್ಕೂ ಸಹ ಅಲ್ಲಲ್ಲಿ ರಕ್ತ ತಾಗಿರುವುದು ಕಂಡುಬಂದಿದ್ದು, ಅದನ್ನು ಜಪ್ತುಪಡಿಸಿಕೊಂಡಿರುತ್ತೇನೆ. ಘಟನಾ ಸ್ಥಳದಲ್ಲಿ ಒಂದು

ಅಡಿಕೆ ಮರದ ದಬ್ಬೆಯೂ ಸಹ ಬಿದ್ದಿದ್ದು, ಚಾಸಾ-13 ರವರು ದಬ್ಬೆಯನ್ನು ತೋರಿಸಿ, ಘಟನೆಯ ಕಾಲಕ್ಕೆ ಮೃತನು ಹಿಡಿದುಕೊಂಡಿದ್ದ ದಬ್ಬೆ ಎಂದು ಹೇಳಿದ್ದು, ಅದನ್ನೂ ಸಹ ಜಪ್ತುಪಡಿಸಿಕೊಂಡಿರುತ್ತೇನೆ. ಆನಂತರ ಜಪ್ತುಪಡಿಸಿಕೊಂಡ ಎಲ್ಲಾ ವಸ್ತುಗಳನ್ನು ಬಿಳಿ ಬಟ್ಟೆಯಲ್ಲಿ ಸುತ್ತಿ, ಅರಗಿನಿಂದ ಸೀಲು ಮಾಡಿ, ಅವುಗಳಿಗೆ ನಾನು, ಚಾಸಾ-13 ಹಾಗೂ ಪಂಚರು ಸಹಿ ಮಾಡಿರುತ್ತೇವೆ. ರಕ್ತ ತಾಗಿದ ಮಣ್ಣನ್ನು ಈಗಾಗಲೇ ಎಂ.ಓ-12 ಎಂದು ಗುರುತಿಸಲಾಗಿದ್ದು, ಅದರ ಮೇಲೆ ಅಂಟಿಸಿರುವ ಚೀಟಿಯಲ್ಲಿರುವ ಸಾಕ್ಷಿಯ ಸಹಿಯನ್ನು ಎಂ.ಓ-12/1(ಬಿ) ಎಂದು, ಚಾಸಾ-13 ರವರ ಸಹಿಯನ್ನು ಎಂ.ಓ-12/1(ಸಿ) ಎಂದು ಗುರುತಿಸಲಾಯಿತು. ರಕ್ತ ತಾಗದ ಮಣ್ಣನ್ನು ಈಗಾಗಲೇ ಎಂ.ಓ-13 ಎಂದು ಗುರುತಿಸಲಾಗಿದ್ದು, ಅದರ ಮೇಲೆ ಅಂಟಿಸಿರುವ ಚೀಟಿಯಲ್ಲಿರುವ ಸಾಕ್ಷಿಯ ಸಹಿಯನ್ನು ಎಂ.ಓ-13/1(ಬಿ) ಎಂದು, ಚಾಸಾ-13 ರವರ ಸಹಿಯನ್ನು ಎಂ.ಓ-13/1(ಸಿ) ಎಂದು ಗುರುತಿಸಲಾಯಿತು. ಕನ್ನಡಕದ ಗಾಜಿನ ಚೂರುಗಳು ಹಾಗೂ ಫ್ರೇಂ ನ್ನು ಒಟ್ಟಾಗಿ ಈಗಾಗಲೇ ಎಂ.ಓ-5 ಎಂದು ಗುರುತಿಸಲಾಗಿದ್ದು, ಅದರ ಮೇಲೆ ಅಂಟಿಸಿರುವ ಚೀಟಿಯಲ್ಲಿರುವ ಸಾಕ್ಷಿಯ ಸಹಿಯನ್ನು ಎಂ.ಓ-5/1(ಬಿ) ಎಂದು, ಚಾಸಾ-13 ರವರ ಸಹಿಯನ್ನು ಎಂ.ಓ-5/1(ಸಿ) ಎಂದು ಗುರುತಿಸಲಾಯಿತು. ಪ್ಯಾರಗಾನ್ ಚಪ್ಪಲಿಯನ್ನು ಈಗಾಗಲೇ ಎಂ.ಓ-6 ಎಂದು ಗುರುತಿಸಲಾಗಿದ್ದು, ಅದರ ಮೇಲೆ ಅಂಟಿಸಿರುವ ಚೀಟಿಯಲ್ಲಿರುವ ಸಾಕ್ಷಿಯ ಸಹಿಯನ್ನು ಎಂ.ಓ-6/1(ಬಿ) ಎಂದು, ಚಾಸಾ-13 ರವರ ಸಹಿಯನ್ನು ಎಂ.ಓ-6/1(ಸಿ) ಎಂದು ಗುರುತಿಸಲಾಯಿತು. ಅಡಕೆ ಮರದ ದಬ್ಬೆಯನ್ನು ಈಗಾಗಲೇ ಎಂ.ಓ-7 ಎಂದು ಗುರುತಿಸಲಾಗಿದ್ದು, ಅದರ ಮೇಲೆ ಅಂಟಿಸಿರುವ ಚೀಟಿಯಲ್ಲಿರುವ ಸಾಕ್ಷಿಯ ಸಹಿಯನ್ನು ಎಂ.ಓ-7/1(ಬಿ) ಎಂದು, ಚಾಸಾ-13 ರವರ ಸಹಿಯನ್ನು ಎಂ.ಓ-7/1(ಸಿ) ಎಂದು ಗುರುತಿಸಲಾಯಿತು.

4. ಜಪ್ತುಪಡಿಸಿಕೊಂಡ ಎಲ್ಲಾ ಸ್ವತ್ತುಗಳನ್ನು ಸ್ವತ್ತು ಪಟ್ಟಿಯಲ್ಲಿ ಅಳವಡಿಸಿ, ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಸ್ಥಳದಲ್ಲಿ ಹಾಜರಿದ್ದ ಸಾಕ್ಷಿದಾರರಾದ ಚಾಸಾ-13, 14, 16 ಮತ್ತು 17 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಚಾಸಾ-13 ರವರ ಹೇಳಿಕೆಯಲ್ಲಿ, "ದಿ.03-05-2021 ರಂದು ಮಧ್ಯಾಹ್ನ 1.15 ಗಂಟೆ ಸುಮಾರಿಗೆ, ಚಂದಾವರ ಗ್ರಾಮದ ಜನತಾ ಕಾಲೋನಿಯಲ್ಲಿರುವ ಚಾಸಾ-14 ರವರ ಮನೆಯ ಕಂಪೌಂಡಿನ ಹತ್ತಿರ ಇರುವ ಮಣ್ಣಿನ ರಸ್ತೆಯ ಮೇಲೆ ಆರೋಪಿಯು ಅಬುತಾಲೀಬ್ ರವರನ್ನು ಕೊಲೆ ಮಾಡುವ ಉದ್ದೇಶದಿಂದ, ಅವರ ಎದೆಗೆ ಚಾಕುವಿನಿಂದ ಚುಚ್ಚಿ ಗಂಭೀರ ಗಾಯಗೊಳಿಸಿ, ಅಲ್ಲಿಂದ

ಓಡಿಹೋಗಿರುತ್ತಾನೆ, ನಂತರ ನಾನು, ಮೃತನ ಹೆಂಡತಿ ಮತ್ತು ಮಗ, ಹಾಗೂ ಇತರರು ಕೂಡಿ ಅಬುತಾಲೀಬನನ್ನು ಚಾಸಾ–16 ರವರ ಆಟೋದಲ್ಲಿ ಕೂರಿಸಿಕೊಂಡು, ಕುಮಟಾದ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ, ಅಲ್ಲಿ ವೈದ್ಯರು ಅಬುತಾಲೀಬ್ ನನ್ನು ಪರೀಕ್ಷಿಸಿ, ಮೃತಪಟ್ಟಿರುತ್ತಾರೆ ಹಾಗೂ ಸ್ಥಳದಲ್ಲಿ ಹಾಜರಿದ್ದ ಚಾಸಾ–10 ರವರು ಘಟನೆಯನ್ನು ತಮ್ಮ ಮೊಬೈಲಿನಲ್ಲಿ ಚಿತ್ರೀಕರಿಸಿರುತ್ತಾರೆ" ಎಂದು ತಿಳಿಸಿರುತ್ತಾರೆ. ಚಾಸಾ–13 ರವರು ಮೃತಪಟ್ಟಿರುವ ಕಾರಣ, ಅವರ ಹೇಳಿಕೆಯನ್ನು ನಿಪಿ–115 ಎಂದು ಗುರುತಿಸಲಾಯಿತು.

5. ಅದೇ ದಿನ ಆರೋಪಿಯ ಪತ್ತೆ ಕಾರ್ಯದಲ್ಲಿದ್ದ ಚಾಸಾ–29 ರವರು ಸಿಬ್ಬಂದಿಯವರೊಂದಿಗೆ ಕೂಡಿ, ಆರೋಪಿಯನ್ನು ಚಂದಾವರದ ಸುಲ್ತಾನಿ ಮಸೀದಿಯ ಹತ್ತಿರದ ಅರಣ್ಯದಲ್ಲಿ ಪತ್ತೆ ಮಾಡಿ, ವಶಕ್ಕೆ ಪಡೆದು, ನನ್ನ ಮುಂದೆ ಹಾಜರುಪಡಿಸಿ ವರದಿಯನ್ನು ನೀಡಿರುತ್ತಾರೆ. ಸದರಿ ವರದಿಯನ್ನು ಈಗಾಗಲೇ ನಿಪಿ–111 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–111(ಬಿ) ಎಂದು ಗುರುತಿಸಲಾಯಿತು. ಆರೋಪಿಯನ್ನು ಕೂಲಂಕುಷವಾಗಿ ವಿಚಾರಣೆ ಮಾಡಿದಾಗ, ತಾನು ಕೃತ್ಯವನ್ನು ಮಾಡಿರುವುದಾಗಿ ಒಪ್ಪಿಕೊಂಡಿದ್ದರಿಂದ, ಆತನಿಗೆ ದಸ್ತಗಿರಿ ನಿಯಮ ಪಾಲಿಸಿ, ಸ್ವ–ಖುಷಿ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಆರೋಪಿಯು ತನ್ನ ಸ್ವ–ಖುಷಿ ಹೇಳಿಕೆಯಲ್ಲಿ, ತಾನು ಅಬುತಾಲೀಬ್ ನನ್ನು ಕೊಲೆ ಮಾಡುವಾಗ ತಾನು ಧರಿಸಿದ್ದ ಶರ್ಟನ್ನು ಚಂದಾವರದ ಹೊಳೆಯಲ್ಲಿ ತೊಳೆದು, ಒಣಗಿಸಿ, ನಂತರ ಅದನ್ನು ಪುನಃ ಹಾಕಿಕೊಂಡಿರುವುದಾಗಿ ಹಾಗೂ ಈಗ ತಾನು ಧರಿಸಿರುವ ಶರ್ಟ್ ಘಟನೆಯ ಕಾಲಕ್ಕೆ ಧರಿಸಿದ್ದ ಶರ್ಟ್ ಆಗಿರುತ್ತದೆ ಎಂದು ಹೇಳಿರುತ್ತಾನೆ. ಆನಂತರ ತಾನು ಕೊಲೆ ಮಾಡುವಾಗ ತಾನು ಧರಿಸಿದ್ದ ಲುಂಗಿಯನ್ನು ಚಂದಾವರದ ಹೊಳೆಯಲ್ಲಿ ತೊಳೆದು, ಒಣಗಿಸಿ, ಅದನ್ನು ಚಂದಾವರದ ಸೇತುವೆಯ ಕೆಳಗೆ ಮುಚ್ಚಿಟ್ಟಿರುವುದಾಗಿ ಮತ್ತು ತಾನು ಕೊಲೆ ಮಾಡಲು ಉಪಯೋಗಿಸಿದ ಚಾಕುವಿಗೆ ತಾಗಿದ ರಕ್ತವನ್ನು ಚಂದಾವರದ ಹೊಳೆಯಲ್ಲಿ ತೊಳೆದು, ಅದನ್ನೂ ಸಹ ಚಂದಾವರದ ಸೇತುವೆಯ ಕೆಳಗೆ ಮುಚ್ಚಿಟ್ಟಿರುವುದಾಗಿ ಹಾಗೂ ತಾವು ನನ್ನ ಸಂಗಡ ಬಂದರೆ, ಸದರಿ ವಸ್ತುಗಳನ್ನು ಮುಚ್ಚಿಟ್ಟ ಸ್ಥಳ ಮತ್ತು ಸದರಿ ವಸ್ತುಗಳನ್ನು ತೋರಿಸುವುದಾಗಿ ಹೇಳಿರುತ್ತಾನೆ.

6. ಆರೋಪಿಯ ಸ್ವ–ಖುಷಿ ಹೇಳಿಕೆಯಲ್ಲಿ "ತಾನು ಕೊಲೆ ಮಾಡುವಾಗ, ಧರಿಸಿದ್ದ ಬಟ್ಟೆಗೆ ರಕ್ತ ತಾಗಿದ್ದರಿಂದ ________ ಸ್ಥಳವನ್ನು ತೋರಿಸಿ, ಹಾಜರುಪಡಿಸಿರುತ್ತೇನೆ" ಎಂದು ಹೇಳಿದ ಹೇಳಿಕೆಯ ಭಾಗವನ್ನು ನಿಪಿ–116 ಎಂದು ಗುರುತಿಸಲಾಯಿತು. ಅದೇ ದಿನ ಆರೋಪಿಯ ಸ್ವ–ಖುಷಿ ಹೇಳಿಕೆಯ ಮೇರೆಗೆ ಆರೋಪಿಯು ಧರಿಸಿದ್ದ ಶರ್ಟ್ ನ್ನು ತಾನು ಘಟನೆಯ ಕಾಲಕ್ಕೆ

ಧರಿಸಿರುವುದಾಗಿ ಹೇಳಿದ ಮೇರೆಗೆ, ಅದನ್ನು ಜಪ್ತುಪಡಿಸಿಕೊಳ್ಳುವ ಕುರಿತು ಚಾಸಾ-6 ಮತ್ತು 7 ರವರನ್ನು ಸಿಬ್ಬಂದಿಯವರ ಮೂಲಕ ಬರಮಾಡಿಕೊಂಡು, ನೋಟಿಸ್ ಜಾರಿ ಮಾಡಿರುತ್ತೇನೆ. ಸದರಿ ಪಂಚರ ಸಮಕ್ಷಮ ಆರೋಪಿಯು ಘಟನೆಯ ಕಾಲದಲ್ಲಿ ತಾನು ಧರಿಸಿದ್ದ ಶರ್ಟನ್ನು ಹಾಜರುಪಡಿಸಿದ್ದು, ಅದು ಕಡು ನೀಲಿ ಬಣ್ಣದ ಪೂರ್ಣ ತೋಳಿನ ಕಾಟನ್ ಶರ್ಟ್ ಆಗಿದ್ದು, ಅದನ್ನು ಪರಿಶೀಲಿಸಲಾಗಿ, ಶರ್ಟಿನ ಮುಂಭಾಗದ ಬಲಭಾಗದಲ್ಲಿ ಅಲ್ಲಲ್ಲಿ ರಕ್ತ ತಾಗಿದ ಒಣಗಿದ ಕಲೆಗಳು ಕಂಡುಬಂದಿದ್ದು, ಸದರಿ ಶರ್ಟನ್ನು ಬಿಳಿ ಬಟ್ಟೆಯಲ್ಲಿ ಸುತ್ತಿ, ಅರಗಿನಿಂದ ಮೊಹರು ಮಾಡಿ, ಅದಕ್ಕೆ ನಾನು, ಆರೋಪಿ ಹಾಗೂ ಪಂಚರು ಸಹಿ ಮಾಡಿರುತ್ತೇವೆ. ಸದರಿ ಪಂಚನಾಮೆಯನ್ನು ರಾತ್ರಿ 11.00 ರಿಂದ 11.50 ಗಂಟೆಯವರೆಗೆ ನಿಪಿ-1 ರಂತೆ ಜರುಗಿಸಿರುತ್ತೇವೆ. ಸದರಿ ನಿಪಿ-1 ಪಂಚನಾಮೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ಪಂಚರಿಗೆ ನೀಡಿದ ನೋಟಿಸನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ಪಂಚನಾಮೆಯ ಸಮಯದಲ್ಲಿ ತೆಗೆದ ಫೋಟೊವನ್ನು ನಿಪಿ-2 ಎಂದು ಗುರುತಿಸಲಾಯಿತು. ಜಪ್ತುಪಡಿಸಿಕೊಂಡಿರುವ ಶರ್ಟನ್ನು ಈಗಾಗಲೇ ಎಂ.ಓ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ಎಂ.ಓ-1(ಬಿ) ಎಂದು ಗುರುತಿಸಲಾಯಿತು. ಜಪ್ತುಪಡಿಸಿಕೊಂಡ ಶರ್ಟನ್ನು ಸ್ವತ್ತು ಪಟ್ಟಿಯಲ್ಲಿ ಅಳವಡಿಸಿ, ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

7. ನಂತರ ಆರೋಪಿಯನ್ನು ವೈದ್ಯಕೀಯ ಪರೀಕ್ಷೆಗೊಳಪಡಿಸಿ, ಠಾಣೆಯಲ್ಲಿ ಭದ್ರತೆಯಲ್ಲಿಟ್ಟಿರುತ್ತೇನೆ. ದಿ.04-05-2021 ರಂದು ಆರೋಪಿಯ ಸ್ವ-ಖುಷಿ ಹೇಳಿಕೆಯ ಮೇರೆಗೆ ಆರೋಪಿಯು ಕೃತ್ಯಕ್ಕೆ ಉಪಯೋಗಿಸಿದ ಚಾಕು ಹಾಗೂ ಕೃತ್ಯದ ವೇಳೆಯಲ್ಲಿ ಆರೋಪಿಯು ಧರಿಸಿದ ಲುಂಗಿಯನ್ನು ಆರೋಪಿತನಿಂದ ತೋರಿಸಿಕೊಂಡು, ಪಂಚನಾಮೆಯ ಮೂಲಕ ಜಪ್ತುಪಡಿಸಿಕೊಳ್ಳುವ ಸಲುವಾಗಿ, ಪಂಚರನ್ನಾಗಿ ಸಿಬ್ಬಂದಿಯವರ ಮೂಲಕ ಚಾಸಾ-6 ಮತ್ತು 7 ರವರನ್ನು ಠಾಣೆಗೆ ಬರಮಾಡಿಕೊಂಡು, ವಿಷಯವನ್ನು ತಿಳಿಸಿ, ಪಂಚರಾಗಿ ಸಹಕರಿಸುವಂತೆ ನೋಟಿಸ್ ಜಾರಿ ಮಾಡಿರುತ್ತೇನೆ. ಆರೋಪಿಯು ಪಂಚರ ಸಮಕ್ಷಮ ತಾನು ಕೊಲೆ ಮಾಡಲು ಉಪಯೋಗಿಸಿದ ಚಾಕು ಹಾಗೂ ಕೃತ್ಯದ ವೇಳೆಯಲ್ಲಿ ಧರಿಸಿದ್ದ ಲುಂಗಿಯನ್ನು ಚಂದಾವರದ ಸೇತುವೆಯ ಕೆಳಗೆ ಬಚ್ಚಿಟ್ಟುರುವುದಾಗಿ ಹಾಗೂ ನನ್ನನ್ನು ಕರೆದುಕೊಂಡು ಹೋದರೆ, ಸದರಿ ವಸ್ತುಗಳನ್ನು ತೋರಿಸಿ, ಹಾಜರುಪಡಿಸುತ್ತೇನೆ ಎಂದು ಹೇಳಿದ್ದು, ಸದರಿ ಆರೋಪಿಗೆ ಪೊಲೀಸ್ ಬೆಂಗಾವಲಿನಲ್ಲಿ ಸದರಿ ಪಂಚರ ಜೊತೆಯಲ್ಲಿ ಡಿ.ಎ.ಆರ್. ವಾಹನದಲ್ಲಿ ಕರೆದುಕೊಂಡು

ಬೆಳಿಗ್ಗೆ 8.00 ಗಂಟೆಗೆ ಠಾಣೆಯಿಂದ ಹೊರಟು, ಆರೋಪಿಯು ಹೇಳಿ ದಾರಿ ತೋರಿಸಿದಂತೆ ಚಂದಾವರದ ಹೊಳೆಯ ಸೇತವೆಯ ಹತ್ತಿರ ಹೋಗಿದ್ದು, ಸೇತುವೆಗಿಂತ 150 ಮೀ. ಹಿಂದೆ ಆರೋಪಿಯು ಡಾಂಬರ್ ರಸ್ತೆಯಿಂದ ಬಲಬದಿಯಲ್ಲಿರುವ ಕಚ್ಚಾ ರಸ್ತೆಯಲ್ಲಿ ಹೋಗುವಂತೆ ಹೇಳಿದ್ದು, ಸುಮಾರು 100 ಮೀ. ಹೋಗಿದ್ದು, ಆನಂತರ ವಾಹನವು ಹೋಗಲು ರಸ್ತೆಯಿಲ್ಲದ ಕಾರಣ, ಅಲ್ಲಿಯೇ ವಾಹನವನ್ನು ನಿಲ್ಲಿಸಿ, ನಂತರ ಆರೋಪಿಯು ಮುಂದಾಗಿ ವಾಹನದಿಂದ ಇಳಿದು, ಚಂದಾವರ ಹೊಳೆಯ ಸೇತುವೆಯ ಕೆಳಗೆ ಸುಮಾರು 50 ಮೀ. ದೂರ ನಡೆದುಕೊಂಡು ಹೋಗಿ, ನಂತರ ಸೇತುವೆಯ ಕೆಳ ಭಾಗದ ದಕ್ಷಿಣ ತುದಿಯಲ್ಲಿ ಗಿಡಗಂಟಿಗಳ ಮಧ್ಯೆ ಇಟ್ಟಿದ್ದ ಒಂದು ಬಿಳಿ ಬಣ್ಣದ ಬಟ್ಟೆಯ ಚೀಲವನ್ನು ತೋರಿಸಿ, ತಾನು ಕೊಲೆ ಮಾಡಲು ಬಳಸಿದ ಚಾಕು ಹಾಗೂ ಕೊಲೆ ಮಾಡುವ ಸಮಯದಲ್ಲಿ ಧರಿಸಿದ ಲುಂಗಿಯನ್ನು ಇದೇ ಚೀಲದಲ್ಲಿ ಮುಚ್ಚಿಟ್ಟಿರುವುದಾಗಿ ಹೇಳಿದ್ದು, ನಂತರ ಅದನ್ನು ಹೊರಗೆ ತಂದು ಹಾಜರುಪಡಿಸಿದ್ದು, ಅದನ್ನು ಪರಿಶೀಲಿಸಲಾಗಿ, ಅದು ಬಿಳಿ ಬಣ್ಣದ ಬಟ್ಟೆಯ ಚೀಲವಾಗಿದ್ದು, ಸದರಿ ಬಟ್ಟೆಯ ಚೀಲದಲ್ಲಿ ಕಪ್ಪ ಬಣ್ಣದ ಚೌಕಾಕಾರದ ಗೆರೆಗಳಿರುವ ಒಂದು ಬಿಳಿ ಬಣ್ಣದ ಲುಂಗಿ ಹಾಗೂ ಒಂದು ಚಾಕು ಇರುತ್ತದೆ. ಚಾಕುವನ್ನು ಪರಿಶೀಲಿಸಲಾಗಿ, ಅದು 31½ ಸೆಂ. ಮೀ. ಉದ್ದದ ಸ್ಟೀಲ್ ಚಾಕುವಾಗಿದ್ದು, ಅದಕ್ಕೆ 12.5 ಸೆಂ.ಮೀ. ಉದ್ದದ ಕಟ್ಟಿಗೆಯ ಹಿಡಿಕೆ ಇದ್ದು, ಹಿಡಿಕೆಯ ಹಿಂದಿನ ತುದಿಯಲ್ಲಿ ಸುಮಾರು ಒಂದು ಇಂಚಿನ ಸ್ಟೀಲ್ ನ ಮುಚ್ಚುಳ ಹಾಕಲಾಗಿರುತ್ತದೆ. ಚಾಕುವಿನ ತುದಿಯು ಚೂಪಾಗಿದ್ದು, ಸದರಿ ಚಾಕುವಿನ ಸ್ಟೀಲ್ ನ ಮೇಲೆ 'Columbia USA Saber No.A 59' ಎಂದು ಬರೆದಿರುತ್ತದೆ. ಸದರಿ ಚಾಕು ಹಾಗೂ ಆರೋಪಿಯು ಘಟನಾ ಕಾಲದಲ್ಲಿ ಧರಿಸಿದ್ದ ಲುಂಗಿಯನ್ನು ಪ್ರತ್ಯೇಕವಾಗಿ ಬಟ್ಟೆಯಲ್ಲಿ ಸುತ್ತಿ, ಅರಗಿನಿಂದ ಮೊಹರು ಮಾಡಿ, ಅದಕ್ಕೆ ನಾನು, ಆರೋಪಿ ಹಾಗೂ ಪಂಚರು ಸಹಿ ಮಾಡಿರುತ್ತೇವೆ ಹಾಗೂ ಸದರಿ ವಸ್ತುಗಳನ್ನು ಜಪ್ತುಪಡಿಸಿಕೊಂಡಿರುತ್ತೇನೆ. ಸದರಿ ವಸ್ತುಗಳನ್ನು ಮುಚ್ಚಿಡಲು ಬಳಸಿದ ಬಟ್ಟೆಯ ಚೀಲವನ್ನೂ ಸಹ, ಒಂದು ಬಿಳಿ ಬಟ್ಟೆಯಲ್ಲಿ ಸುತ್ತಿ, ಅರಗಿನಿಂದ ಮಾಹರು ಮಾಡಿ, ನಾನು, ಆರೋಪಿ ಹಾಗೂ ಪಂಚರು ಸಹಿ ಮಾಡಿರುತ್ತೇವೆ. ಸದರಿ ಪಂಚನಾಮೆಯ ಕಾಲಕ್ಕೆ, ಆರೋಪಿಯು ಚಾಕು ಹಾಗೂ ಲುಂಗಿಯನ್ನು ಬಚ್ಚಿಟ್ಟ ಸ್ಥಳದಿಂದ ಸುಮಾರು 40 ಅಡಿ ದೂರದಲ್ಲಿ ಚಂದಾವರದ ಹೊಳೆಯಲ್ಲಿ ನಿಂತ ನೀರು ಇರುವ ಜಾಗವನ್ನು ತೋರಿಸಿ, ಸದರಿ ನೀರಿನಲ್ಲಿ ಚಾಕು ಹಾಗೂ ಲುಂಗಿಯನ್ನು ತೊಳೆದು, ಪಕ್ಕದ ಜಾಗದಲ್ಲಿ ಒಣಗಿಸಿರುವುದಾಗಿ ಹೇಳಿರುತ್ತಾನೆ. ಠಾಣೆಯಿಂದ ಹೊರಟಾಗ ಅಂದರೆ ಬೆಳಿಗ್ಗೆ 8.00 ಗಂಟೆಯಿಂದ 10.30 ಗಂಟೆಯವರೆಗೆ ನಿಪಿ–4 ರಂತೆ ಪಂಚನಾಮೆಯನ್ನು ಜರುಗಿಸಿರುತ್ತೇನೆ ಹಾಗೂ ನಿಪಿ–8 ರಂತೆ ನಕಾಶೆಯನ್ನು ತಯಾರಿಸಿರುತ್ತೇನೆ, ನಿಪಿ–4 ಮತ್ತು ನಿಪಿ–8 ರಲ್ಲಿರುವ

ಸಾಕ್ಷಿಯ ಸಹಿಯನ್ನು ನಿಪಿ-4(ಸಿ) ಮತ್ತು 8(ಬಿ) ಎಂದು ಗುರತಿಸಲಾಯಿತು. ಸದರಿ ಪಂಚನಾಮೆಯ ಕಾಲಕ್ಕೆ ನಿಪಿ-5, 6 ಮತ್ತು 7 ರಂತೆ ಫೋಟೊಗಳನ್ನು ತೆಗೆಸಿರುತ್ತೇನೆ. ಪಂಚನಾಮೆಯ ಸಮಯದಲ್ಲಿ ಜಪ್ತುಪಡಿಸಿಕೊಂಡ ಲುಂಗಿಯನ್ನು ಎಂ.ಓ-3 ಎಂದು, ಸ್ಟೀಲ್ ಚಾಕುವನ್ನು ಎಂ.ಓ-2 ಎಂದು, ಬಿಳಿ ಬಣ್ಣದ ಬಟ್ಟೆಯ ಚೀಲವನ್ನು ಎಂ.ಓ-4 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಎಂ.ಓ-3(ಬಿ), ಎಂ.ಓ-2(ಬಿ) ಮತ್ತು ಎಂ.ಓ-4(ಬಿ) ಎಂದು ಗುರುತಿಸಲಾಯಿತು. ಜಪ್ತುಪಡಿಸಿಕೊಂಡ ಎಲ್ಲಾ ಸ್ವತ್ತುಗಳನ್ನು ಸ್ವತ್ತು ಪಟ್ಟಿಯಲ್ಲಿ ಅಳವಡಿಸಿ, ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

8. ಅದೇ ದಿನ ಘಟನಾ ಸ್ಥಳಕ್ಕೆ ಪುನಃ ಭೇಟಿ ನೀಡಿ, ಸಾಕ್ಷಿದಾರರಾದ ಚಾಸಾ-15 ರವರು ಘಟನಾ ಸ್ಥಳದ ಹತ್ತಿರ ಇರುವ ಚಾಸಾ-14 ರವರ ಮನೆಯ ಕಂಪೌಂಡಿನಲ್ಲಿದ್ದ ಬಟ್ಟೆ ತೊಳೆಯುವ ಜಾಗವನ್ನು ತೋರಿಸಿ, ತಾನು ಇದೇ ಜಾಗದಲ್ಲಿ ಬಟ್ಟೆ ತೊಳೆಯುತ್ತಿದ್ದಾಗ, ಆರೋಪಿಯು ತನ್ನ ಮನೆಯ ಜಗಲಿಯ ಮೇಲೆ ನಿಂತು, ಅಸಭ್ಯವಾಗಿ ವರ್ತಿಸಿದ್ದು, ಆಗ ನಾನು ಇದೇ ಜಾಗದಲ್ಲಿ ಬಟ್ಟೆ ತೊಳೆಯುತ್ತಿದ್ದೆ ಎಂದು ಹೇಳಿದ್ದು, ಸದರಿ ಸ್ಥಳದ ಪಂಚನಾಮೆಯನ್ನು ಜರುಗಿಸುವ ಕುರಿತು, ಸದರಿ ಕಾಲೋನಿಯಲ್ಲಿ ವಾಸವಿದ್ದ ಜಹೀರ್ ಅಬ್ಬಾಸ್ ಮತ್ತು ಇಮಾಂ ಸಾಬ್ ಜೈಲುದ್ದೀನ್ ಘನಿ ರವರಿಗೆ ಪಂಚನಾಮೆಗೆ ಬರುವಂತೆ ನೋಟಿಸ್ ನೀಡಿರುತ್ತೇನೆ. ಸಾಕ್ಷಿಯ ತಾನು ನೀಡಿದ ನೋಟಿಸನ್ನು ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-114 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-114(ಬಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯ ಪಂಚರಾದ ಜಹೀರ್ ಅಬ್ಬಾಸ್ ರವರು ಮೃತಪಟ್ಟಿರುವ ಕಾರಣ, ಅವರ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-114(ಸಿ) ಎಂದು ಗುರುತಿಸಲಾಯಿತು. ಆನಂತರ ಸದರಿ ಸ್ಥಳದಲ್ಲಿ ಪಂಚರ ಸಮಕ್ಷಮ ಬೆಳಿಗ್ಗೆ 11.00 ಗಂಟೆಯಿಂದ 12.00 ಗಂಟೆಯವರೆಗೆ ನಿಪಿ-24 ರಂತೆ ಪಂಚನಾಮೆಯನ್ನು ಮಾಡಿರುತ್ತೇನೆ ಮತ್ತು ನಿಪಿ-25 ಮತ್ತು 26 ರಂತೆ ಫೋಟೊ ತೆಗೆಸಿರುತ್ತೇನೆ. ನಿಪಿ-24 ಪಂಚನಾಮೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-24(ಡಿ) ಎಂದು ಗುರುತಿಸಲಾಯಿತು ಹಾಗೂ ಪಂಚರಾದ ಜಹೀರ್ ಅಬ್ಬಾಸ್ ರವರ ಸಹಿಯನ್ನು ನಿಪಿ-24(ಈ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ-1 ರವರ ಮರುಹೇಳಿಕೆಯನ್ನು ಹಾಗೂ ಚಾಸಾ-11, 12, 15 ಹಾಗೂ 19 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಆರೋಪಿಯ ವೈದ್ಯಕೀಯ ಪರೀಕ್ಷೆ ಮಾಡಿಸಿ, ನಂತರ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

9. ಅದೇ ದಿನ ಮೃತ ದೇಹದ ಬೆಂಗಾವಲಿಗಿದ್ದ ಚಾಸಾ–35 ರವರು ಮರಣೋತ್ತರ ಪರೀಕ್ಷೆಯ ನಂತರ ಶವವನ್ನು ವಾರಸುದಾರರಿಗೆ ಬಿಟ್ಟುಕೊಟ್ಟ ಬಗ್ಗೆ ರಶೀದಿಯನ್ನು ಹಾಜರುಪಡಿಸಿರುತ್ತಾರೆ. ಚಾಸಾ–35 ರವರು ತಂದು ಹಾಜರುಪಡಿಸಿದ ರಶೀದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–117 ಎಂದು, ಸಾಕ್ಷಿಯ ಸಹಿಯನ್ನು ನಿಪಿ–117(ಎ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ–35 ರವರು ಮೃತನ ಮೈಮೇಲಿದ್ದ ಬಟ್ಟೆಗಳನ್ನು ವೈದ್ಯಾಧಿಕಾರಿಗಳಿಂದ ಪಡೆದುಕೊಂಡು ಬಂದು, ನನ್ನ ಮುಂದೆ ಹಾಜರುಪಡಿಸಿದ್ದು, ಸದರಿ ಬಟ್ಟೆಗಳನ್ನು ಜಪ್ತುಪಡಿಸಿಕೊಳ್ಳುವ ಕುರಿತು ಚಾಸಾ–5 ಮತ್ತು 8 ರವರಿಗೆ ಪಂಚರಾಗಿ ಬರುವಂತೆ ನೋಟಸ್ ನೀಡಿರುತ್ತೇನೆ. ಸದರಿ ಪಂಚರ ಸಮಕ್ಷಮ ಚಾಸಾ–35 ರವರು ಹಾಜರುಪಡಿಸಿದ ಮೃತನಿಗೆ ಸೇರಿದ ತಿಳಿ ಗುಲಾಬಿ ಹಾಗೂ ಕಂದು ಬಣ್ಣದ ಒಂದು ಲುಂಗಿ, ತಿಳಿ ಗುಲಾಬಿ ಬಣ್ಣದ ಪೂರ್ಣ ತೋಳಿನ ಒಂದು ಶರ್ಟ್ ಹಾಗೂ ಕಡು ಗುಲಾಬಿ ಬಣ್ಣದ ವಿ ಆಕಾರದ ಒಂದು ನಿಕ್ಕರ್ ಇವುಗಳನ್ನು ಪ್ರತ್ಯೇಕವಾಗಿ ಬಿಳಿ ಬಟ್ಟೆಯಲ್ಲಿ ಸುತ್ತಿ, ಅರಗಿನಿಂದ ಮೊಹರು ಮಾಡಿ, ನಾನು, ಪಂಚರು ಮತ್ತು ಚಾಸಾ–35 ರವರು ಸಹಿ ಮಾಡಿರುತ್ತೇವೆ ಹಾಗೂ ಸಂಜೆ 4.00 ರಿಂದ 5.30 ರವರೆಗೆ ನಿಪಿ–36 ರಂತೆ ಪಂಚನಾಮೆ ಮಾಡಿರುತ್ತೇವೆ ಮತ್ತು ನಿಪಿ–37, 38 ಮತ್ತು 39 ರಂತೆ ಫೋಟೊ ತೆಗೆಸಿರುತ್ತೇನೆ. ಪಂಚರಿಗೆ ನೀಡಿದ ನೋಟಿಸನ್ನು ಈಗಾಗಲೇ ನಿಪಿ–35 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–35(ಬಿ) ಎಂದು ಗುರುತಿಸಲಾಯಿತು. ನಿಪಿ–36 ಪಂಚನಾಮೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–36(ಡಿ) ಎಂದು ಗುರುತಿಸಲಾಯಿತು. ಪಂಚನಾಮೆ ಮಾಡುವ ಸಮಯದಲ್ಲಿ ಮೃತನ ಶರ್ಟ್, ಲುಂಗಿ ಮತ್ತು ನಿಕ್ಕರ್ ನ್ನು ಪರಿಶೀಲಿಸಿದಾಗ, ಶರ್ಟಿನ ಎಡಭಾಗದಲ್ಲಿ ಕಿಸೆಯ ಕೆಳಗೆ 2 ಇಂಚು ಉದ್ದದಷ್ಟು ಬಟ್ಟೆ ಹರಿದಿರುತ್ತದೆ ಹಾಗೂ ಎಲ್ಲಾ ಬಟ್ಟೆಗಳಿಗೂ ರಕ್ತ ತಾಗಿ ಒಣಗಿದಂತೆ ಕಂಡುಬಂದಿರುತ್ತದೆ. ನಂತರ ಜಪ್ತುಪಡಿಸಿಕೊಂಡ ಬಟ್ಟೆಗಳನ್ನು ಸ್ವತ್ತು ಪಟ್ಟಿಯಲ್ಲಿ ಅಳವಡಿಸಿ, ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಮೃತನ ಲುಂಗಿಯನ್ನು ಈಗಾಗಲೇ ಎಂ.ಓ–8 ಎಂದು, ಶರ್ಟನ್ನು ಎಂ.ಓ–9 ಎಂದು, ನಿಕ್ಕರನ್ನು ಎಂ.ಓ–10 ಎಂದು ಗುರುತಿಸಲಾಗಿದ್ದು, ಅವುಗಳ ಮೇಲಿರುವ ಸಾಕ್ಷಿಯ ಸಹಿಯನ್ನು ಎಂ.ಓ–8/1(ಸಿ), ಎಂ.ಓ–9/1(ಸಿ) ಮತ್ತು ಎಂ.ಓ–10/1(ಸಿ) ಎಂದು ಗುರುತಿಸಲಾಯಿತು.

10. ಅದೇ ದಿನ ಚಾಸಾ–34 ರವರು ಶವಪಂಚನಾಮೆಯ ಕಾಲಕ್ಕೆ, ಘಟನಾ ಸ್ಥಳದ ಪಂಚನಾಮೆಯ ಕಾಲಕ್ಕೆ ಹಾಗೂ ಆರೋಪಿಯು ಘಟನಾ ಸಮಯದಲ್ಲಿ ಧರಿಸಿದ್ದ ಶರ್ಟನ್ನು ಜಪ್ತುಪಡಿಸಿಕೊಳ್ಳುವ ಕಾಲಕ್ಕೆ, ಫೋಟೊ ತೆಗೆದ ಫೋಟೋಗಳನ್ನು ಹಾಗೂ ಡಿ.ವಿ.ಡಿ.ಯನ್ನು

ಕಲಂ.65–ಬಿ ಪ್ರಮಾಣ ಪತ್ರದೊಂದಿಗೆ ನೀಡಿದ್ದು, ಅವುಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಡಿ.ವಿ.ಡಿ.ಗಳನ್ನು ಈಗಾಗಲೇ ನಿಪಿ–56, 57 ಮತ್ತು 58 ಎಂದು ಹಾಗೂ 65–ಬಿ ಪ್ರಮಾಣ ಪತ್ರವನ್ನು ಈಗಾಗಲೇ ನಿಪಿ–55 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–55(ಬಿ) ಎಂದು ಗುರುತಿಸಲಾಯಿತು.

11. ದಿ.05–05–2021 ರಂದು ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ–10 ರವರು ಠಾಣೆಗೆ ಹಾಜರಾಗಿ ಘಟನೆಯ ಕಾಲಕ್ಕೆ ತಾನು ತನ್ನ ಮೊಬೈಲಿನಿಂದ ಘಟನೆಯನ್ನು ಚಿತ್ರೀಕರಣ ಮಾಡಿರುತ್ತೇನೆ ಎಂದು ಹೇಳಿ ತನ್ನ ಮೊಬೈಲನ್ನು ಹಾಜರುಪಡಿಸಿದ್ದು, ಈ ಬಗ್ಗೆ ಚಾಸಾ–8 ಮತ್ತು 5 ರವರಿಗೆ ಪಂಚರಾಗಿ ಬರುವಂತೆ ನೋಡಿಸ್ ಜಾರಿ ಮಾಡಿ, ಸದರಿಯವರ ಸಮಕ್ಷಮ ಚಾಸಾ–10 ರವರು ಹಾಜರುಪಡಿಸಿದ Redmi–Note 9 Pro Max ಮೊಬೈಲನ್ನು ಪರಿಶೀಲಿಸಿದಾಗ, ಸದರಿ ಮೊಬೈಲಿನ ಗ್ಯಾಲರಿಯಲ್ಲಿ ದಿ.03–05–2021 ರಂದು ಮಧ್ಯಾಹ್ನ 1.14 ಗಂಟೆಗೆ ಘಟನೆಗೆ ಸಂಬಂಧಿಸಿದ 15 ಸೆಕೆಂಡುಗಳ ವೀಡಿಯೋ ಇದ್ದು, ಅದರಲ್ಲಿ ಆರೋಪಿಯು ಕಡು ನೀಲಿ ಬಣ್ಣದ ಪೂರ್ಣ ತೋಳಿನ ಶರ್ಟ್ ಹಾಗೂ ಬಿಳಿ ಬಣ್ಣದ ಲುಂಗಿಯನ್ನು ಧರಿಸಿದ್ದು, ಆರೋಪಿಯು ಆತನ ಬಲಗೈಯಲ್ಲಿ ಹಿಡಿದುಕೊಂಡಿದ್ದ ಚಾಕುವಿನಿಂದ ಅಬುತಾಲೀಬ್ ರವರ ಎದೆಗೆ ಬಲವಾಗಿ ಇರಿದಿದ್ದು, ವೀಡಿಯೋದಲ್ಲಿ ಕಂಡುಬಂದಿರುತ್ತದೆ. ಸದರಿ ವೀಡಿಯೋದಲ್ಲಿ ಜಗಳ ಬಿಡಿಸಲು ಬಂದ ತಿಳಿ ಗುಲಾಬಿ ಬಣ್ಣದ ಅರ್ಧ ತೋಳಿನ ಟೀ–ಶರ್ಟ್ ಧರಿಸಿರುವ ವ್ಯಕ್ತಿಯು ಚಾಸಾ–11 ರವರಾಗಿದ್ದು, ಕೆಂಪು ಬಣ್ಣದ ಪೂರ್ಣ ತೋಳಿನ ಶರ್ಟ್ ಧರಿಸಿರುವ ಇನ್ನೊಬ್ಬ ವ್ಯಕ್ತಿ ಚಾಸಾ–12 ಆಗಿರುತ್ತಾರೆ ಎಂದು ಚಾಸಾ–10 ರವರು ಮತ್ತು ಪಂಚರು ನೋಡಿ ಗುರುತಿಸಿರುತ್ತಾರೆ. ಪಂಚನಾಮೆಯ ಕಾಲಕ್ಕೆ ಸಿಬ್ಬಂದಿ ಚಾಸಾ–35 ರವರ ಸಹಾಯದಿಂದ ಸದರಿ ಮೊಬೈಲಿನ ಐ.ಎಂ.ಈ.ಐ. ನಂಬರು ಕಾಣಿಸುವಂತೆ ಸ್ಕ್ರೀನ್ ಶಾಟ್ ಹಾಗೂ ಮೊಬೈಲ್ ಗ್ಯಾಲರಿಯನ್ನು ತೆರೆದಾಗ, ವೀಡಿಯೋಗಳು ಇರುವ ಸ್ಕ್ರೀನ್ ಶಾಟ್ ಹಾಗೂ ಮೊಬೈಲಿನ ಗ್ಯಾಲರಿಯಲ್ಲಿದ್ದ ಘಟನೆಗೆ ಸಂಬಂಧಿಸಿದ ವೀಡಿಯೋ ಕ್ಲಿಪ್ ನ್ನು ತೆರೆದು ನೋಡಿದಾಗ, ಸದರಿ ವೀಡಿಯೋದ ಸ್ಕ್ರೀನ್ ಶಾಟ್ ಗಳನ್ನು ಹಾಗೂ ವೀಡಿಯೋ ಮಾಡಿದ ದಿನಾಂಕ ಮತ್ತು ಸಮಯವನ್ನು ತೋರಿಸುವ (meta data) ಸ್ಕ್ರೀನ್ ಶಾಟ್ ನ್ನು ತೆಗೆದು ಅವುಗಳನ್ನು ಪ್ರಿಂಟ್ ಮಾಡಿ, ಸದರಿ ಸ್ಕ್ರೀನ್ ಶಾಟ್ ಮುದ್ರಿತ ಪ್ರತಿಗಳ ಮೇಲೆ ಪಂಚರು, ನಾನು ಹಾಗೂ ಚಾಸಾ–10 ರವರು ಸಹಿ ಮಾಡಿರುತ್ತೇವೆ. ನಂತರ ಘಟನೆಗೆ ಸಂಬಂಧಿಸಿದ ವೀಡಿಯೋ ಕ್ಲಿಪ್ ನ್ನು ಹಾಗೂ ಸ್ಕ್ರೀನ್ ಶಾಟ್ ಗಳನ್ನು ಚಾಸಾ–35 ರವರ ಸಹಾಯದಿಂದ ಸಿ.ಡಿ.ಗೆ ವರ್ಗಾಯಿಸಿಕೊಂಡು, ಸದರಿ ಮೊಬೈಲನ್ನು ಸ್ವಿಚ್ ಆಫ್ ಮಾಡಿ, ಬಿಳಿ ಬಟ್ಟೆಯಲ್ಲಿ ಸುತ್ತಿ, ಅರಗಿನಿಂದ ಮೊಹರು ಮಾಡಿ ಜಪ್ತುಪಡಿಸಿಕೊಂಡು, ಅದಕ್ಕೆ ನಾನು, ಪಂಚರು, ಚಾಸಾ–10 ಮತ್ತು

35 ರವರು ಸಹಿ ಮಾಡಿರುತ್ತೇವೆ. ಆ ಸಮಯದಲ್ಲಿ ಬೆಳಿಗ್ಗೆ 11.30 ರಿಂದ 12.30 ಗಂಟೆಯವರೆಗೆ ನಿಪಿ–15 ರಂತೆ ಪಂಚನಾಮೆ ಮಾಡಿ, ನಿಪಿ–16 ರಂತೆ ಫೋಟೊ ತೆಗೆದಿರುತ್ತೇನೆ. ಪಂಚರಿಗೆ ನೀಡಿದ ನೋಟಿಸನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ–40 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–40(ಬಿ) ಎಂದು ಗುರುತಿಸಲಾಯಿತು. ನಿಪಿ–15 ಪಂಚನಾಮೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–15(ಬಿ) ಎಂದು ಗುರುತಿಸಲಾಯಿತು. ಸ್ಕ್ರೀನ್ ಶಾಟ್ ಗಳನ್ನು ನಿಪಿ–18 ರಿಂದ 21 ಎಂದು ಗುರುತಿಸಲಾಗಿದ್ದು, ಅವುಗಳಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–18(ಸಿ) ಯಿಂದ 21(ಸಿ) ಎಂದು ಗುರುತಿಸಲಾಯಿತು. ಮೊಬೈಲನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಎಂ.ಓ–11 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ಎಂ.ಓ–11(ಬಿ) ಎಂದು ಗುರುತಿಸಲಾಯಿತು. ಎಂ.ಓ–11 ಮೊಬೈಲಿನಲ್ಲಿದ್ದ ಘಟನೆಗೆ ಸಂಬಂಧಿಸಿದ ದೃಶ್ಯಾವಳಿಯನ್ನು ಸಾಕ್ಷಿಗೆ ತೋರಿಸಲಾಗಿ, ಅದನ್ನು ನೋಡಿ ಗುರುತಿಸಿರುತ್ತಾರೆ. ಆನಂತರ ಜಪ್ತುಪಡಿಸಿಕೊಂಡ ಮೊಬೈಲನ್ನು ಸ್ವತ್ತು ಪಟ್ಟಿಯಲ್ಲಿ ಅಳವಡಿಸಿ, ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

12. ಅದೇ ದಿನ ನಾನು ಸಾಕ್ಷಿದಾರ ಚಾಸಾ–18 ರವರಿಗೆ ಮೃತ ಅಬುತಾಲೀಬ್ ರವರ ಭಾವಚಿತ್ರವನ್ನು ಹಾಜರುಪಡಿಸುವಂತೆ ಸೂಚಿಸಿದ ಮೇರೆಗೆ ಅದೇ ದಿನ ಚಾಸಾ–18 ರವರು ಮೃತನ ಭಾವಚಿತ್ರವನ್ನು ತಂದು ಹಾಜರುಪಡಿಸಿದ್ದು, ಸದರಿ ಭಾವಚಿತ್ರವನ್ನು ಜಪ್ತುಪಡಿಸಿಕೊಳ್ಳುವ ಕುರಿತು, ಚಾಸಾ–8 ಹಾಗೂ 5 ರವರನ್ನು ಪಂಚರಾಗಿ ಬರುವಂತೆ ನೋಟಿಸ್ ಜಾರಿ ಮಾಡಿರುತ್ತೇನೆ. ಸದರಿ ಪಂಚರ ಸಮಕ್ಷಮ ಚಾಸಾ–18 ರವರು ಹಾಜರುಪಡಿಸಿದ ಭಾವಚಿತ್ರವನ್ನು ಒಂದು ಬಿಳಿ ಹಾಳೆಗೆ ಅಂಟಿಸಿ, ಮಧ್ಯಾಹ್ನ 12.45 ರಿಂದ 1.30 ರವರೆಗೆ ನಿಪಿ–42 ರಂತೆ ಪಂಚನಾಮೆ ಮಾಡಿರುತ್ತೇನೆ ಹಾಗೂ ನಿಪಿ–43 ರಂತೆ ಫೋಟೊ ತೆಗೆದಿರುತ್ತೇನೆ. ಆನಂತರ ಸದರಿ ಪಂಚನಾಮೆಗೆ ನಾನು, ಪಂಚರು ಹಾಗೂ ಚಾಸಾ–18 ರವರು ಸಹಿ ಮಾಡಿರುತ್ತೇವೆ ಹಾಗೂ ಭಾವಚಿತ್ರವನ್ನು ಜಪ್ತುಪಡಿಸಿಕೊಂಡಿರುತ್ತೇನೆ. ಪಂಚರಿಗೆ ನೀಡಿದ ನೋಟಿಸನ್ನು ಈಗಾಗಲೇ ನಿಪಿ–41 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–41(ಬಿ) ಎಂದು ಗುರುತಿಸಲಾಯಿತು. ನಿಪಿ–42 ರಲ್ಲಿರು ಸಾಕ್ಷಿಯ ಸಹಿಯನ್ನು ನಿಪಿ–42(ಡಿ) ಎಂದು ಗುರುತಿಸಲಾಯಿತು. ಚಾಸಾ–18 ರವರು ಹಾಜರುಪಡಿಸಿರುವ ಅಬು ತಾಲೀಬ್ ರವರ ಫೋಟೊವನ್ನು ಈಗಾಗಲೇ ನಿಪಿ–44 ಎಂದು ಗುರುತಿಸಲಾಗಿದ್ದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–44(ಸಿ) ಎಂದು

ಗುರುತಿಸಲಾಯಿತು. ಆನಂತರ ಜಪ್ತುಪಡಿಸಿಕೊಂಡ ಫೋಟೋವನ್ನು ಸ್ವತ್ತು ಪಟ್ಟಿಯಲ್ಲಿ ಅಳವಡಿಸಿ, ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

13. ಅದೇ ದಿನ ಚಾಸಾ-10 ರವರು ಠಾಣೆಗೆ ಹಾಜರಾಗಿ, ತಾವು ಮೊಬೈಲ್ ಖರೀದಿಸಿದ ಬಗ್ಗೆ ರಶೀದಿಯನ್ನು ಹಾಜರುಪಡಿಸಿದ್ದು, ಅದನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡು, ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ರಶೀದಿಯನ್ನು ಈಗಾಗಲೇ ನಿಪಿ-17 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-17(ಎ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ-16 ಹಾಗೂ 18 ರವರ ಹೇಳಿಕೆಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ-34 ರವರು ಚಾಸಾ-10 ರವರ ಮೊಬೈಲ್ ಜಪ್ತುಪಡಿಸಿಕೊಂಡ ಕಾಲಕ್ಕೆ, ಚಾಸಾ-18 ರವರು ಹಾಜರುಪಡಿಸಿದ ಮೃತನ ಭಾವಚಿತ್ರವನ್ನು ಜಪ್ತುಪಡಿಸಿದ ಕಾಲಕ್ಕೆ ತೆಗೆದ ಫೋಟೋಗಳನ್ನು ಸಿ.ಡಿ.ಗೆ ವರ್ಗಾಯಿಸಿ, ಮುದ್ರಿತ ಫೋಟೋಗಳನ್ನು ಮತ್ತು 2 ಸಿ.ಡಿ.ಯನ್ನು ಕಲಂ.65-ಬಿ ಪ್ರಮಾಣ ಪತ್ರದೊಂದಿಗೆ ನೀಡಿದ್ದು, ಅವುಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಿ.ಡಿ.ಗಳನ್ನು ಈಗಾಗಲೇ ನಿಪಿ-64 ಮತ್ತು 66 ಎಂದು, 65-ಬಿ ಪ್ರಮಾಣ ಪತ್ರವನ್ನು ಈಗಾಗಲೇ ನಿಪಿ-63 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-63(ಬಿ) ಎಂದು ಗುರುತಿಸಲಾಯಿತು.

(ನ್ಯಾಯಾಲಯದ ಅವಧಿ ಮುಗಿದಿದ್ದರಿಂದ, ಮುಂದುವರೆದ ಮುಖ್ಯ ವಿಚಾರಣೆಗೆ ಹಾಗೂ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ